ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಅಧ್ಯಕ್ಷರೇ, ಮೊನ್ನೆ ತಾನೆ ಈ ವಿಚಾರದ ಬಗ್ಗೆ ಸದನದಲ್ಲಿ ಉತ್ತರ ಕೊಟ್ಟಿದ್ದೇವೆ. ಈಗಲೂ ಅದೇ ಉತ್ತರವನ್ನು ಕೊಡಲಿಕ್ಕೆ ಇಚ್ಛೆ ಪಡುತ್ತೇನೆ. ಜೀವಾವಧಿ ಶಿಕ್ಷೆಗೆ ಒಳಗಾದವರನ್ನು 10 ವರ್ಷಗಳ ನಂತರ ಬಿಡಬೇಕೆಂದಿದೆ. ಇದರ ಬಗ್ಗೆ ದಿನಾಂಕ : 9.4.91ರಂದು ನಮ್ಮ ಸಚಿವ ಸಂಪುಟ ತೀರ್ಮಾನ ಕೈಗೊಂಡಿದೆ. ಈ ಬಗ್ಗೆ ಹೊಸದಾಗಿ ತಿದ್ದುಪಡಿ ಮಸೂದೆಯನ್ನು ವಿಧಾನ ಮಂಡಲದ ಮುಂದೆ ಮಂಡನೆ ಮಾಡುವ ದೃಷ್ಟಿಯಲ್ಲಿದ್ದೇವೆ. ಅದಾದ ನಂತರ ನಾವು ಮಾಡುತ್ತೇವೆ. ತಾವು ಕೇರಳ ರಾಜ್ಯದ ರೆಫರೆನ್ಸ್ ತೆಗೆದುಕೊಂಡು ಕೇಳುತ್ತಿದ್ದೀರಿ, ಅದು ಗೌರ್ನರ್‌ಗೆ ಮಾತ್ರ ಅವಕಾಶ ಇದೆ. ಭಾರತದಲ್ಲಿ ಎಲ್ಲೂ ಆಗಿಲ್ಲ. ಕೇರಳದಲ್ಲಿ ಮಾತ್ರ ಆಗಿದೆ. ನಾವು ಕೂಡಾ ಅದರ ಬಗ್ಗೆ ಚರ್ಚೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ : ಅಂಥ ವಿಷಯ ಅಲ್ಲವೆಂದು ಹೇಳುತ್ತೀರಾ? ನಮ್ಮ ರಾಜ್ಯ ಸರ್ಕಾರಕ್ಕೆ ಖೈದಿಗಳನ್ನು 10 ವರ್ಷ ಆದ ನಂತರ ಬಿಡಲಿಕ್ಕೆ ಕಾನೂನು ತಿದ್ದುಪಡಿ ಮಾಡಲಿಕ್ಕೆ ಏನೂ ಅವಕಾಶ ಇಲ್ಲವೆಂದು ಹೇಳುತ್ತೀರಾ?

ಶ್ರೀ ಡಿ.ಕೆ. ಶಿವಕುಮಾರ್ : ತಿದ್ದುಪಡಿ ತರಲಿಕ್ಕೆ ಅವಕಾಶ ಇದೆ. ಇಲ್ಲಿ ತಂದನಂತರ ಮತ್ತೆ ನಾವು ದೆಹಲಿಗೆ ಕಳುಹಿಸಬೇಕಾಗುತ್ತದೆ ತಿದ್ದುಪಡಿ ಮಸೂದೆ ಮಂಡನೆಯಾದ ಮೇಲೆ ದೆಹಲಿಗೆ ಕಳುಹಿಸುತ್ತೇವೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೇ, ಬಹಳ ದಿವಸಗಳಿಂದ ಇದು ನೆನೆಗುದಿಗೆ ಬಿದ್ದಿರತಕ್ಕಂಥ ವಿಷಯ.

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ, ಅಧ್ಯಕ್ಷರೇ ಈ 10 ವರ್ಷ ಶಿಕ್ಷೆ ಅನುಭವಿಸಿರತಕ್ಕಂಥ ಖೈದಿಗಳು ಎಷ್ಟು ಜನ ನಮ್ಮ ಕರ್ನಾಟಕ ರಾಜ್ಯದಲ್ಲಿ ಇದ್ದಾರೆ?

ಶ್ರೀ ಡಿ.ಕೆ. ಶಿವಕುಮಾರ್ : 242 ಜನ ಇದ್ದಾರೆ.

ಶ್ರೀ ವಾಟಾಳ್ ನಾಗರಾಜ್ : 242 ಜನರಲ್ಲಿ ಈಗಾಗಲೇ ಅಂಬೇಡ್ಕರ್ ದಿನಾಚರಣೆ ದಿನದಂದು ಕೆಲವರನ್ನು ಬಿಟ್ಟಿದ್ದೇವೆಂದು ಹೇಳಿದ್ದೀರಿ. ಕೆಲವರನ್ನು, ಅಂದರೆ ಯಾವ ರೀತಿ ಅವರನ್ನು ಬಿಡುವುದಕ್ಕೆ ಹೋದಿರಿ? ಈಗ ಹತ್ತು, ಹನ್ನೆರಡು ಜನರನ್ನು ಬಿಟ್ಟಿದ್ದೇವೆಂದು ತಮ್ಮ ಉತ್ತರದಲ್ಲಿ ಹೇಳಿದ್ದೀರಿ. ಮಿಕ್ಕವರನ್ನು ಏಕೆ ಬಿಡಲಿಲ್ಲ? ಮಿಕ್ಕವರನ್ನು ಬಿಡದೆ ಇರುವುದಕ್ಕೆ ಕಾರಣ ಏನು?

ಶ್ರೀ ಡಿ.ಕೆ. ಶಿವಕುಮಾರ್ : ಅಧ್ಯಕ್ಷರೇ 8-2-78ಕ್ಕೆ ಮೊದಲು ಜೀವಾವಧಿ ಶಿಕ್ಷೆಗೆ ಗುರಿಯಾದವರನ್ನು ಮಾತ್ರ ನಾವು ಈಗಾಗಲೇ ಬಿಡುಗಡೆ ಮಾಡಿದ್ದೇವೆ. 9-4-91ರಲ್ಲಿ ಕ್ಯಾಬಿನೆಟ್ ಡಿಸೀಷನ್ ಮಾಡಿ 10-4-91ರಲ್ಲಿ ಒಂದು ಆರ್ಡರ್‌ನ್ನು ಮಾಡಲಾಗಿದೆ. 14ನೇ ತಾರೀಖು 11 ಜನರನ್ನು ಈಗಾಗಲೇ ಬಿಟ್ಟಿದ್ದೇವೆ. ಇನ್ನು ಮಿಕ್ಕವರನ್ನೂ ಬಿಡಲಿಕ್ಕೆ ಕಾನೂನಿನಲ್ಲಿ ಅಡಚಣೆ ಇದೆ. ಅದರ ಬಗ್ಗೆ ಈಗಾಗಲೇ ಚಿಂತನೆ ಮಾಡುತ್ತಿದ್ದೇನೆ. ನಾನು ಆಗಲೇ ಹೇಳಿದ ಹಾಗೆ ಇದಕ್ಕೆ ಸಂಬಂಧಪಟ್ಟಂತೆ ಅಮೆಂಡ್‌ಮೆಂಟ್‌ನ್ನು ತಂದ ನಂತರ ಇದನ್ನು ಯೋಚನೆ ಮಾಡುತ್ತೇವೆ.

ಮಂತ್ರಿಗಳ ಆಸ್ತಿ ಮತ್ತು ಸಾಲಗಳ ಬಗ್ಗೆ.

3165 -ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರವು ಎಲ್ಲ ಸಚಿವರುಗಳ ಆಸ್ತಿ , ಮತ್ತು ಸಾಲಗಳ ವಿವರಗಳನ್ನು ಹೊಂದಿದೆಯೆ?

ಆ) ಹಾಗಿದ್ದಲ್ಲಿ, ಪ್ರತಿ ಸಚಿವರುಗಳ ಬಗ್ಗೆ ವಿವರಗಳನ್ನು ನೀಡುವುದು?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಸಾದತ್ ಅಲಿ ಖಾನ್ : ಅಧ್ಯಕ್ಷರೆ, ನನ್ನ ಪ್ರಶ್ನೆ Whether the Government is having the details of assets and liabilities of the various ministers? ಎಂದು ಇದೆ. ಇದಕ್ಕೆ ಎಂದು ಉತ್ತರ ಬಂದಿದೆ. It is mandatory on the part of the Chief Minister to collect the details of the assets and liabilities of the Ministers.

MR. SPEAKER: Who was made it mandatory?

ಶ್ರೀ ಸಾದತ್ ಅಲಿ ಖಾನ್ : ಲೋಕಾಯುಕ್ತದ ಮೇಲೆ ಬಂದಿದೆಯಲ್ಲಾ?

MR. SPEAKER: You should have asked him the question whether Lokayukta...

ಶ್ರೀ ಸಾದತ್ ಅಲಿ ಖಾನ್ : ಲೋಕಾಯುಕ್ತದ್ದು ಬಂದಿದೆಯಲ್ಲಾ? ಆಕ್ಟ್ ಇದೆಯಲ್ಲಾ?

ಅಧ್ಯಕ್ಷರು : ಸರ್ಕಾರದವರು ಹೊಂದಿದ್ದಾರೆ? Government cannot be equated with the Lokayukta.

SRI SADATH ALI KHAN: In the whole of South India, the Chief Ministers are collecting the details.

ಶ್ರೀ ಎಸ್. ಬಂಗಾರಪ್ಪ : ತಾವು ಕುಳಿತುಕೊಳ್ಳಿ, ನಾನು ಹೇಳುತ್ತೇನೆ. ಮಾನ್ಯ ಸಭಾಧ್ಯಕ್ಷರೆ, ಲೋಕಾಯುಕ್ತ ಕಾನೂನು ಜಾರಿಗೆ ಬರುವುದಕ್ಕಿಂತ ಮುಂಚೆ, ಕಳೆದಸಾರಿ ಅವರವರ ಆಸ್ತಿಗಳನ್ನು ಘೋಷಣೆ ಮಾಡಬೇಕೆನ್ನತಕ್ಕಂಥ ಒಂದು ಸಂಪ್ರದಾಯದ ಪ್ರಕಾರ ಇಲ್ಲಿ ನಡೆಸತಕ್ಕಂಥ ಒಂದು ವಿಚಾರ ಇತ್ತು.

ಲೋಕಾಯುಕ್ತ ಕಾನೂನು ಜಾರಿಗೆ ಬಂದ ಮೇಲೆ ನಾವು ಅದರಲ್ಲಿ ಸೆಕ್ಷನ್ ಅನ್ನು ಹಾಕಿದ್ದೇವೆ. ಪಬ್ಲಿಕ್ ಸರ್ವೆಂಟ್ ಯಾರೂ ಎಂದು ಒಂದು ಡೆಫನಿಷನ್ ಹಾಕಿ we are all public servants including legislators of both the Houses of Legislature.

ನಾವು ನಮ್ಮ ಆಸ್ತಿಗಳನ್ನು ಘೋಷಣೆ ಮಾಡಬೇಕು, ಅದನ್ನು ಲೋಕಾಯುಕ್ತಕ್ಕೆ ಕೊಡಬೇಕು ಎನ್ನತಕ್ಕದ್ದು ಲೋಕಾಯುಕ್ತ ಆಕ್ಟ್‌ನಲ್ಲಿಯೇ ಇದೆ. ಅದನ್ನು ಐ ಥಿಂಕ್ ಮಾರ್ಜಿನೊಳಗಾಗಿ ಕೊಡಬೇಕು. ಕೊಡದೇ ಇದ್ದರೆ ನಿಮಗೆ ಮತ್ತೊಂದು ನೋಟೀಸ್ ಕೊಡುತ್ತಾರೆ. ಅದಕ್ಕೆ ಎರಡು ತಿಂಗಳು ಟೈಮ್ ಇರುತ್ತದೆ. ಅದಕ್ಕೂ ನೀವು ಕೊಡದೇ ಇದ್ದರೆ ಗವರ್ನರ್‌ರವರಿಗೆ ಒಂದು ಲಿಸ್ಟ್ ಕಳಿಸಿಕೊಡುತ್ತಾರೆ. ಆಮೇಲೆ ಪತ್ರಿಕೆಯಲ್ಲಿ ನಿಮ್ಮ ಹೆಸರನ್ನು ಪ್ರಕಟ ಮಾಡುತ್ತಾರೆ. ಅದು ಅಷ್ಟೇ ಇರುವುದು ಕಾನೂನು. ಆದ್ದರಿಂದ ಅಲ್ಲಿ ಲಿಸ್ಟ್ ಕೊಡತಕ್ಕ ವಿಚಾರ ಲೋಕಾಯುಕ್ತದ ಕಾನೂನು

ಪ್ರಕಾರ ಇರುವುದರಿಂದ ಸರ್ಕಾರದವರು ಆಸ್ತಿಗಳ ವಿವರಣೆಗಳನ್ನು ಪಡೆದುಕೊಳ್ಳತಕ್ಕ ಕಾನೂನು ಯಾವುದೂ ಇಲ್ಲ. ನಾವು ಈ ಕೆಲಸ ಮಾಡತಕ್ಕ ಅಗತ್ಯತೆಯೂ ಇಲ್ಲ. ನಿಮಗೆ ಏನು ವಿವರ ಬೇಕು ಅದು ಲೋಕಾಯುಕ್ತದಲ್ಲಿ ಸಿಗುತ್ತದೆ.

ಕರ್ನಾಟಕ ವಿಧಾನಮಂಡಲದ ನೌಕರರುಗಳಿಗೆ ಮನರಂಜನಾ ಸೌಲಭ್ಯಗಳನ್ನು ಒದಗಿಸುವ ಬಗ್ಗೆ.

3446 - ಶ್ರೀ ಕೆ. ಕುಶಾಲ (ಸುಳ್ಯ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ವಿಧಾನಮಂಡಲದಲ್ಲಿ ಸುಮಾರು 800 ಜನ ಅಧಿಕಾರಿಗಳು ಹಾಗೂ ನೌಕರರುಗಳು ಕೆಲಸ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ಕರ್ನಾಟಕ ವಿಧಾನ ಮಂಡಲದ ಅಧಿಕಾರಿಗಳಿಗೆ ಮನರಂಜನಾ ಅನುಕೂಲತೆ ಇಲ್ಲದಿರುವುದು ಹಾಗೂ ಇವರುಗಳಿಗೆ ಕೆ.ಜಿ.ಎಸ್.ಕ್ಲಬ್‌ನಲ್ಲಿ ಸದಸ್ಯತ್ವ ನಿರಾಕರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಹಾಗಿದ್ದಲ್ಲಿ, ಕರ್ನಾಟಕ ವಿಧಾನಮಂಡಲದವರಿಗೆ ಬೇರೆ ಕೆ.ಎಲ್.ಎಸ್. ಕ್ಲಬ್ ನಡೆಸಲು ಸ್ಥಾವಕಾಶವನ್ನು ವಿಧಾನ ಸೌಧದ ಹತ್ತಿರ ಕೆ.ಜಿ.ಎಸ್. ಕ್ಲಬ್ ರೀತಿ ಒದಗಿಸಲಾಗುವುದೇ?*

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಅ) ಹೌದು.

ಆ) ಕೆ.ಜಿ.ಎಸ್. ಕ್ಲಬ್ ನಿಯಮಾವಳಿಗಳ (ಬೈಲಾ) ಪ್ರಕಾರ ಸದಸ್ಯತ್ವವನ್ನು ಕರ್ನಾಟಕ ಸರ್ಕಾರದ ಸಚಿವಾಲಯ ನೌಕರರುಗಳಿಗೆ ಮಾತ್ರ ಸೀಮಿತಗೊಳಿಸಲಾಗಿದೆ.

ಇ) ಈ ಬಗ್ಗೆ ಕರ್ನಾಟಕ ವಿಧಾನಮಂಡಲದವರು ಕ್ರಮ ಕೈಗೊಳ್ಳಬೇಕು.

ಶ್ರೀ ಕೆ. ಕುಶಾಲ: 'ಅ' ಉತ್ತರದಲ್ಲಿ ಈ ರೀತಿ ಹೇಳಿದ್ದಾರೆ..

ಶ್ರೀ ವಾಟಾಳ್ ನಾಗರಾಜ್ : ಮುದ್ರಣದಲ್ಲಿ ಶ್ರೀಮತಿ ಕುಶಾಲ ಎಂದು ಇದೆ. ಶ್ರೀಮತಿ ಕುಶಾಲ ಯಾರು? ಇದು ತೀರ್ಮಾನ ಆಗಬೇಕು. ಏಕೆಂದರೆ ಇಲ್ಲಿ ಮುದ್ರಣದಲ್ಲಿ ಇದು ಬಂದುಬಿಟ್ಟಿದೆ. ನನಗೂ ಅನುಮಾನ. ಇಲ್ಲಿ ಶ್ರೀಮತಿಗಳನ್ನು ನೋಡುತ್ತಿದ್ದೇನೆ. ಆ ಕಡೆ ಶ್ರೀಮತಿ ನೋಡಿ ನನಗೆ ಅನುಮಾನ ಬಂದಿದೆ. ದಯಮಾಡಿ ತಾವು ಇದನ್ನು ಪರಿಹಾರ ಮಾಡಬೇಕು.

ಶ್ರೀ ಬಿ.ಎಂ. ಇದಿನಬ್ಬ : ಅದು ಅಚ್ಚಿನಲ್ಲಿ ಮಿಸ್ಟೇಕ್ ಆಗಿರಬೇಕು.

ಶ್ರೀ ವಾಟಾಳ್ ನಾಗರಾಜ್ : ಮುದ್ರಣದಲ್ಲಿಯೇ ದೋಷ ಇದೆ. ಶ್ರೀ ಕುಶಾಲರವರು ವೇಷ ಬದಲಾವಣೆ ಮಾಡುವುದರಲ್ಲಿ ಪ್ರಸಿದ್ಧಿಯೇನೋ ಎಂಬ ಅನುಮಾನ ನನಗೆ ಬರುತ್ತಿದೆ. ಇದು ಮುದ್ರಣ ನೋಡಿ.

ಶ್ರೀ ಬಿ.ಎಂ. ಇದಿನಬ್ಬ : ಅವರು ಶ್ರೀಮತಿ ಕುಶಾಲರಲ್ಲ, ಶ್ರೀ ಕುಶಾಲರೇ.

ಶ್ರೀ ವಾಟಾಳ್ ನಾಗರಾಜ್ : ಇಲ್ಲಿ ಮುದ್ರಣದಲ್ಲಿ ದೋಷ ಇದೆ. ಅಧ್ಯಕ್ಷರು ಇದಕ್ಕೆ ಪರಿಹಾರ ಹುಡುಕಬೇಕು.

ಶ್ರೀ ಬಿ.ಎಂ. ಇದಿನಬ್ಬ : ಇನ್ನು ಮೇಲೆ ಶ್ರೀಮತಿ ಎಂದು ಹುಡುಕುವವರು ಎಂದು ಆಯಿತು.

ಶ್ರೀ ವಾಟಾಳ್ ನಾಗರಾಜ್ : ಮುದ್ರಣದಲ್ಲಿ ಶ್ರೀಮತಿ ಎಂದು ಬಂದಿದೆ.